**ದಿನಾಂಕಃ 27-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ-**

ಸಾಕ್ಷಿ ನಿಪಿ-2 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2(ಬಿ) ಎಂದು ಗುರುತಿಸಲಾಂತು. ಸದರಿ ಸಹಿಯನ್ನು 2012 ರಲ್ಲಿ ಮಾಡಿರುತ್ತೇನೆ. ದಿನಾಂಕ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಸಹಿಯನ್ನು ಬೀಜ ನಿಗಮ ಆಫಿಸಿನಲ್ಲಿ ಮಾಡಿರುತ್ತೆನೆ. ನಿಪಿ 2 ಮಾಡುವ ಸಮಯಕ್ಕೆ ಪೊಲಿಸರು ನಿಮ್ಮಿಂದ ಯಾವುದಾದಾರು ವಸ್ತುವನ್ನು ಅಮಾನತ್ತು ಪಡಿಸಿಕೊಂಡರಾ ಎಂದರೆ ಕ್ಯಾಶ್ ರಿಜಿಸ್ಟರ್ ಮತ್ತು ಸ್ಟಾಕ್ ಲೆಡ್ಜರ್ ವಶಪಡಿಸಿಕೊಂಡಿರುತ್ತಾರೆ. ಯಾವ ವರ್ಷ ಎಂದು ಹೇಳಲು ಬರುತ್ತದಾ ಎಂದರೆ ಇಲ್ಲ ಎನ್ನುತ್ತಾರೆ. ಸಾಕ್ಷಿ ಈಗಾಗಲೇ ಗುರುತಿಸಿರುವ ನಿಪಿ 3 ರಲ್ಲಿ ಗುರುತಿಸಿರುವ ಸಹಿಯನ್ನು ನಿಪಿ 3(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಲ್ಲಿ ಮಾಡಿದ್ದಿರಾ ಎಂದರೆ ಕಚೇರಿಯಲ್ಲಿ ಮಾಡಿರುಎತ್ತೆನೆ ಎನ್ನುತ್ತಾರೆ. ಯಾವ ದಿನಾಂಕದಕಂದು ಹೇಳಲು ಬರುತ್ತದಾ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ಸಹಿಯನ್ನು 2012 ರಲ್ಲಿ ಮಾಡಿರುತ್ತೆನೆ ಎನ್ನುತ್ತಾರೆ. ಪಂಚನಾಮೆಯನ್ನು ಯಾವ ವಿಚಾರಕ್ಕೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಪೊಲಿಸರು ಬಂದಿದ್ದರು ಮಾಡು ಎಂದಿದ್ದಕ್ಕೆ ಮಾಡಿರುತ್ತೆನೆ ಎನ್ನುತ್ತಾರೆ. ಸಾಕ್ಷಿ ನಿಪಿ 4 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 4(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಕಚೇರಿಯಲ್ಲಿ 2012 ರಲ್ಲಿ ಮಾಡಿರುತ್ತೆನೆ. ಸದರಿ ಸಹಿಯನ್ನು ಯಾವ ವಿಚಾರಕ್ಕಾಗಿ ಮಾಡಿರುತ್ತೀರಿ ಎಂದರೇ ಸಾಕ್ಷಿ ಪೊಲೀಸರು ಬಂದಿದ್ದರು ವಿಟ್ ನೆಸ್ ಆಗಿ ಮಾಡು ಎಂದಿದ್ದಕೆ ಮಾಡಿರುತ್ತೆನೆ. ಈ ಹಿಂದೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೀರಿ ಆಗ ವೆಂಕಟೇಶ

ಎಂಬುವವರರು ಹಣ ದುರುಪಯೋಗ ಪಡಿಸಿಕೊಂಡಿರುತ್ತೀರಾ ಅವರನ್ನು ನೋಡಿದರೆ ಗುರುತಿಸುತ್ತೀರಾ ಎಂದರೆ ಗುರುತಿಸುತ್ತೇನೆ ಎನ್ನುತ್ತಾರೆ. ಸಾಕ್ಷಿ ನ್ಯಾಯಾಲಯ ಮುಂದೆ ಇರುವ ಆರೋಪಿ ನೋಡಿ ಗುರುತಿಸುತ್ತಾರೆ. ಈ ಹಿಂದೆ ಸಾಕ್ಷಿ ನುಡಿದಂತೆ ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೇನೆ ಎನ್ನುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು:: ಮಾನ್ಯ ಸ ಸ ಅ ರವರಿಂದ:–**

ಪೊಲಿಸರು ಬಂದು ನಿಮ್ಮ ಸಮಕ್ಷಮ ನಿಪಿ 3 ನ್ನು ಮಾಡಿಕೊಂಡಿರುತ್ತಾರೆ ಎಂದರೆ ಹೌದು ಎನ್ನುತ್ತಾರೆ. ಪೊಲಿಸರು ಬಂದು ನಿಪಿ 5 ರಿಂದ 16 ಅನ್ನು ನಿಮ್ಮ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಈ ರೀತಿ ಅಮಾನತ್ತು ಪಡಿಸಿಕೊಂಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀಸವಾಲು: ಶ್ರೀ.ಬಿ.ಆರ್.ಎಸ್. 4 ಮತ್ತು 5 ನೇ ಆರೋಪಿ ಪರ ವಕೀಲರಿಂದ:–**

ನಿಪಿ 2 ರಿಂದ 4 ರಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಿಚಾರವಾಗಿ ನಿಮಗೆ ಠಾಣೆಗೆ ಕರೆಸಿರುತ್ತಾರೆ ಎಂದರೆ ಇಲ್ಲ ಎನ್ನುತ್ತಾರೆ. ಯಾವ ವಿಚಾರವಾಗಿ ಪ್ರಕರಣ ಇರುತ್ತದೆ ಎಂದರೆ ತಿಳಿದುಕೊಂಡಿರುವುದಿಲ್ಲ ಎಂದರೆ ಹಣ ದುರುಪಯೋಗ ಆಗಿರುತ್ತದೆ ಎನ್ನುತ್ತಾರೆ. ದಿ: 02.06.2009 ರಲ್ಲಿ 4 ನೇ ಆರೋಪಿಯನ್ನು ಕೊಪ್ಪಳಕ್ಕೆ ಡೆಪ್ಯುಟ್

ಮಾಡಿರುತ್ತಾರೆ ಎಂದರೆ ಹೌದು ಎನ್ನುತ್ತಾರೆ. ಸದರಿ 4 ನೇ ಆರೋಪಿ 17.06.2009 ರಲ್ಲಿ ವಾಪಸ್ಸು ಬಂದಿರುತ್ತಾರೆ ಎಂದರೆ ಹೌದು. ಸದರಿ ದಿನದಂದೇ 4 ನೇ ಆರೋಪಿಗೆ ಬೆಂಗಳೂರಿಗೆ ವರ್ಗಾವಣೆ ಆಗಿ ಅದೇ ದಿನದಂದೇ ಹೋಗಿರುತ್ತಾರೆ ಎಂದರೆ ಹೌದು ಎನ್ನುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ 4 ನೇ ಆರೋಪಿಯ ಪಾತ್ರ ಇಲ್ಲ ಎಂದರೆ ನನಗೆ ಗೊತ್ತಿಲ್ಲ ಪೊಲಿಸರು ಸ್ಥಳಕ್ಕೆ ಬಂದಿರುವುದಿಲ್ಲ ಯಾವುದೇ ತಹರದ ಮಹಜರ್ ಮಾಡಿರುದಿಲ್ಲ ಮತ್ತು ನಿಮ್ಮ ಸಹಿಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪೊಲಸ್ ಠಾಣೆಗೆ ಹೊಗಿ ರುಜು ಹಾಕಿರುತ್ತೀರಿ ಎಂದರೆ ಹೌದು.

**ಪಾಟೀಸವಾಲುಃ ಶ್ರೀ.ಎಂ. ಆರ್. 2 ನೇ ಆರೋಪಿ ಪರ ವಕೀಲರಿಂದಃ–**

ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ನಿಮ್ಮ ಸಹಿ ಪಡೆದುಕೊಂಡಿಲ್ಲ ಎಂದರೆ ಪಡೆದುಕೊಂಡಿರುತ್ತಾರೆ ಎನ್ನುತ್ತಾರೆ, ಆ ರೀತಿ ಅಮಾನತ್ತು ಮಾಡಿಲ್ಲ ಮತ್ತು ಸಹಿ ಪಡೆದಿಲ್ಲ ಎಂದರೆ ಪಡೆದಿರುತ್ತಾರೆ ಎನ್ನುತ್ತಾರೆ. ಪೊಲಿಸರು ವಶಪಡಿಸಿಕೊಂಡಿರುವ ವಸ್ತುಗಳ ಮೇಲೆ ಸಹಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ 2 ರಿಂದ 4 ರಲ್ಲಿ ಏನು ಬರೆದಿರುತ್ತದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಯಾವ ಯಾವ ಮಹಜರ್ ಗಳಿಗೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಇಲ್ಲ ಎನ್ನುತ್ತಾರೆ.

**ಪಾಟೀಸವಾಲುಃ ಶ್ರೀ.ಎಸ್. ಇ. ಜಿ. 1 ನೇ ಆರೋಪಿ ಪರ ವಕೀಲರಿಂದಃ–**

1 ನೇ ಆರೋಪಿ ಹಣವನ್ನು ಪಡೆದುಕೊಂಡಿರುವ ಬಗ್ಗೆ ನಿಮ್ಮ ಮುಂದೆ ಸದರಿ ಹಣವನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ಘಟನೆ ಬಗ್ಗೆ ನೀವು ರಾಜಿ ಮಾಡಿಕೂಂಡಿರುತ್ತೀರಿ ಎಂದರೆ ಹೌದು ಎನ್ನುತ್ತಾರೆ.

ಸಿಡಬ್ಲೂ:

<u>ಮರು ವಿಚಾರಣೆ ಇಲ್ಲ</u>.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**Sd/-**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.